ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ಪ್ರಕಟಣೆಯ ಕೃಪೆಗಾಗಿ

# ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಹೊಣೆ – ಶ್ರೀ ಬಿ.ಎಂ ಗುರುಪ್ರಸಾದ್

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ವಿಶ್ವ ಪರಿಸರ ದಿನಾಚರಣೆ

ಕೊಳ್ಳೇಗಾಲ – 05-06-2018 : ನಮ್ಮ ಸುತ್ತ ಮುತ್ತಲ ಪರಿಸರ ಸದಾ ಆರೋಗ್ಯಕರವಾಗಿರಬೇಕು. ಅದಕ್ಕಾಗಿ ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳಬೇಕು. ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಬೇಕು ಎಂದು ಶ್ರೀ ಬಿ.ಎಂ ಗುರುಪ್ರಸಾದ್, ಉಪನ್ಯಾಸಕರು, ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ಕೊಳ್ಳೇಗಾಲ ಇವರು ತಿಳಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ "ವಿಶ್ವ ಪರಿಸರ ದಿನಾಚರಣೆ" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪರಿಸರ ಸಂರಕ್ಷಣೆ ಕೇವಲ ಜಾಗೃತಿ, ಜಾಥಾ, ಉಪನ್ಯಾಸಕ್ಕೆ ಸೀಮಿತವಾಗದೆ ಸಂರಕ್ಷಣೆ ಯೋಜನೆಗಳನ್ನು ಕಾರ್ಯರೂಪಕ್ಕೆ ತರವುದಕ್ಕಾಗಿ ಶ್ರಮಿಸಬೇಕು. ತಾವೆಲ್ಲರೂ ತಮ್ಮ ತಮ್ಮ ಮನೆಯ ಸುತ್ತ ಮುತ್ತಲಿನ ಸ್ವಚ್ಛತೆ ಕಾಪಾಡುವುದು, ತ್ಯಾಜ್ಯ ವಿಲೇವಾರಿ ಕುರಿತು ಅರಿವು ಮೂಡಿಸುವುದರಿಂದ ಪರಿಸರವನ್ನು ಸಂರಕ್ಷಿಸಬಹುದಾಗಿದೆ. ತಮ್ಮ ಬಡಾವಣೆಗಳಲ್ಲಿನ ಮನೆಗಳಿಗೆ ಭೇಟಿಕೊಟ್ಟು ಪರಿಸರ ಜಾಗೃತಿ ಕಸವಿಂಗಡನೆ, ಮರಗಳನ್ನು ಬೆಳೆಸುವುದರ ಕುರಿತು ಅರಿವು ಮೂಡಿಸುವಂತೆ ಕರೆ ನೀಡಿದರು.

ಪ್ರಸ್ತುತ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ (ತಿದ್ದುಪಡಿಯಾದ) ಕಾಯ್ದೆ – 2018 ಜಾರಿಯಲ್ಲಿರುತ್ತದೆ. ಪ್ಲಾಸ್ಟಿಕ್ ತ್ಯಾಜ್ಯದ ಉಳಿಕೆಯನ್ನು ಕಡಿಮೆ ಮಾಡುವುದು, ಉಳಿಕೆಯನ್ನು ಸಂಗ್ರಹಿಸಿ ಮರುಬಳಕೆ ಮಾಡುವುದು, ಬಳಸಲಾಗದ ಉಳಿಕೆಯನ್ನು ರಸ್ತೆ ನಿರ್ಮಾಣದಂತಹ ಕಾರ್ಯಗಳಲ್ಲಿ ಬಳಸುವುದನ್ನು ಕಾನೂನಿನಡಿಯಲ್ಲಿ ಕಡ್ಡಾಯಗೊಳಿಸಲಾಗಿದೆಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ ಒಂದು ವಸ್ತುವಾಗಿ ಪ್ಲಾಸ್ಟಿಕ್ ಬಹುಪಯೋಗಿ ಎಂಬುದು ಸತ್ಯ. ಆದರೆ ಮಲಿನತೆಯ ಮಹಾನ್ ರೂಪ ತಾಳಿರುವುದು ಪ್ಲಾಸ್ಟಿಕ್ ಎಂಬುದೂ ಅಷ್ಟೇ ಸತ್ಯ. ಈ ಬಾರಿಯ ವಿಶ್ವ ಪರಿಸರ ದಿನಾಚರಣೆಯ ವಿಶೇಷ ಆಚರಣೆಯ ಆತಿಥ್ಯ ದೇಶ ಭಾರತ ಎಂಬುದು. 1974 ರಿಂದಲೇ ವಿಶ್ವಸಂಸ್ಥೆಯು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿರುತ್ತದೆ. ವಿಶ್ವಸಂಸ್ಥೆಯ ಆಶಯ ಇದನ್ನು ಜನಪರವಾಗಿಸುವುದು, ಆ ಮೂಲಕ ಪ್ರತೀ ನಾಗರೀಕನೂ ಪರಿಸರದ ಹಿತಕ್ಕೆ ಕೈಲಾಗದ ಮಟ್ಟಿಗೆ ಕೈಗೂಡಿಸಬೇಕೆಂಬುದು ಎಂದು ತಿಳಿಸುತ್ತಾ ಪ್ಲಾಸ್ಟಿಕ್ ಮಾಲಿನ್ಯ ತಡೆಗೆ ಏನು ಮಾಡಬೇಕಿದೆ ಎಂದು ಪ್ರತಿಯೊಬ್ಬರೂ ಪ್ರಶ್ನಿಸಿಕೊಳ್ಳುವುದಲ್ಲದೆ, ಉತ್ತರವಾಗಿ ಪಾಲಿಸುವ ಕ್ರಮವನ್ನು ರೂಪಿಸಿಕೊಳ್ಳುವಂತೆ ಕರೆ ನೀಡಿದರು.

ವೇದಿಕೆಯಲ್ಲಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಶ್ರೀ ಎನ್ ಮಹದೇವಸ್ವಾಮಿ, ನರ್ಸಿಂಗ್ ಶಾಲೆಯ ಪ್ರಾಚಾರ್ಯ ಶ್ರೀ ಜಿ ವಿಷಕಂಠಮೂರ್ತಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಂಗವಾಗಿ ಕಾಲೇಜಿನ ಕ್ಯಾಂಪಸ್‌ನಲ್ಲಿ ಸಸಿಗಳನ್ನು ನೆಡಲಾಯಿತು. ಪದವಿಪೂರ್ವ ವಿಭಾಗದ ವಿದ್ಯಾರ್ಥಿನಿಯರು ಹಾಜರಿದ್ದರು.

**“ವಿಶ್ವ ಪರಿಸರ ದಿನಾಚರಣೆ”** ಕಾರ್ಯಕ್ರಮವನ್ನು ಶ್ರೀ ಬಿ.ಎಂ ಗುರುಪ್ರಸಾದ್‌ಯವರು ಉದ್ಘಾಟಿಸುತ್ತಿರುವುದು.
ಶ್ರೀ ಜಿ ವಿಷಕಂಠಮೂರ್ತಿ, ಪ್ರೊ. ಉಮೇಶ, ಶ್ರೀ ಮಹದೇವಸ್ವಾಮಿಯವರನ್ನು ಕಾಣಬಹುದಾಗಿದೆ.




**“ವಿಶ್ವ ಪರಿಸರ ದಿನಾಚರಣೆ”** ಕುರಿತು ಶ್ರೀ ಬಿ.ಎಂ ಗುರುಪ್ರಸಾದ್ ಮಾತನಾಡುತ್ತಿರುವು. ಶ್ರೀ ವಿಷಕಂಠಮೂರ್ತಿ, ಪ್ರಾಚಾರ್ಯ ಪ್ರೊ. ಉಮೇಶರವರನ್ನು ಕಾಣಬಹುದಾಗಿದೆ.




ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ವಿದ್ಯಾರ್ಥಿನಿಯರು



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಪ್ರಾಚಾರ್ಯರು, ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು.

